**<u>1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.</u>**

**<u>ಸಿ.ಸಿ. ಸಂಖ್ಯೆ:4199/2024</u>**

| | |
|---|---|
| ಫ್ರಾಸಾ : | 02 |
| ಚಾಸಾ : | 03 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 17.06.2026.**

| | | |
|---|---|---|
| ಸಾಕ್ಷಿಯ ಹೆಸರು | : | ಕಲ್ಲೇಶ |
| ತಂದೆಯ ಹೆಸರು | : | ಲೋಕೇಶ್ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೊನ್ನೆನಹಳ್ಳಿ |

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ</u>**

ಚಾಸಾ 1, 2 ಮತ್ತು 4 ಪರಿಚಯವಿಲ್ಲ. ಈ ಪ್ರಕರಣದ ಬಗ್ಗೆ ನನಗೆ  ಮಾಹಿತಿ ಇಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ನಾನು ಪೋಲಿಸರಿಗೆ ಯಾವುದೆ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ, ಯಾವುದೆ ವಾಹನಗಳನ್ನು ಅಮಾನತುಪಡಿಸಿಕೊಂಡಿಲ್ಲ, ನನ್ನ ಸಮಕ್ಷಮ ಯಾರು ಸಹಿ ಮಾಡಿಲ್ಲ ಮತ್ತು ಪೋಲಿಸರು ನನಗೆ ನೋಟಿಸು ನೀಡಿಲ್ಲ. ಆರೋಪಿಯನ್ನು ನಾನು ನೋಡಿಲ್ಲ.

ಈ ಹಂತದಲ್ಲಿ ಸಾಕ್ಷಿಗೆ ನೋಟಿಸಿನ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟಿಸಿನ ಪ್ರತಿಯನ್ನು **ನಿಪಿ–2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–2(ಎ)** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ಸ್ಥಳ ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸ್ಥಳ ಪಂಚನಾಮೆ ಪ್ರತಿಯನ್ನು **ನಿಪಿ–3** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–3(ಎ)** ಎಂದು ಗುರುತಿಸಲಾಯಿತು.

ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು, ಆದರೆ ಅದನ್ನು ಎಲ್ಲಿ ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಫೋಟೋಗಳನ್ನು **ನಿಪಿ–4 ಮತ್ತು 5** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯು ಅಮಾನತು ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಅಮಾನತು ಪಂಚನಾಮೆ ಪ್ರತಿಯನ್ನು **ನಿಪಿ–6** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–6(ಎ)** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ ಪೋಲಿಸ್ ನೋಟಿಸಿನ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪೋಲಿಸ್ ನೋಟಿಸಿನ ಪ್ರತಿಯನ್ನು **ನಿಪಿ–7** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–7(ಎ)** ಎಂದು ಗುರುತಿಸಲಾಯಿತು.

ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು, ಆದರೆ ಅದನ್ನು ಎಲ್ಲಿ ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಫೋಟೋಗಳನ್ನು **ನಿಪಿ–8 ಮತ್ತು 9** ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ದಿಃ 08.09.2024 ರಂದು ನಾನು ನನ್ನ ಬೈಕಿನಲ್ಲಿ ಚೌಳಹಿರಿಯೂರಿಗೆ ಹೋಗುತ್ತಿದ್ದಾಗ ನನ್ನ ಮುಂದೆ ಒಬ್ಬ ಬೈಕ್ ಸವಾರ ತನ್ನ ಬೈಕನ್ನು ಚಲಾಯಿಸಿಕೊಂಡು ಸುಮಾರು ಸಂಜೆ 4.15 ಸಮಯದಲ್ಲಿ ಚೌಳಹಿರಿಯುೂರು ಕಡೆಗೆ ಹೋಗಲು ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಚೌಳಹಿರಿಯೂರು ಸಣ್ಣೇಣಹಳ್ಳಿ ಗೇಟ್ ನಡುವೆ ಮಲ್ಲಪ್ಪರವರ ಜಮೀನಿನ ಬಳಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಚೌಳಹಿರಿಯೂರು ಕಡೆಯಿಂದ ಒಂದು ಕಾರನ್ನು ಅತಿವೇಗ ಮತ್ತು ಅಜಾರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಸದರಿ ದ್ವಿಚಕ್ರ ವಾಹನಕ್ಕೆ ಅಪಘಾತಪಡಿಸಿದರು ಎಂದರೆ ಸರಿಯಲ್ಲ. ನಂತರ ನಾನು ನನ್ನ ದ್ವಿಚಕ್ರ ವಾಹನವನ್ನು ರಸ್ತೆ ಬದಿಗೆ ನಿಲ್ಲಿಸಿ ಹೋಗಿದ್ದು, ಆ ಸಮಯಕ್ಕೆ ಚಾಸಾ 4 ರವರು ಅಲ್ಲಿಗೆ ಬಂದಿದ್ದು, ಇಬ್ಬರು ನೋಡಲಾಗಿ ಬೈಕ್ ಸವಾರ ಕಲ್ಲೆದೇವರಹಳ್ಳಿ ಗ್ರಾಮದ ಮಂಜಪ್ಪ ಆಗಿದ್ದರು ಎಂದರೆ ಸರಿಯಲ್ಲ. ಅವರಿಗೆ ಅಪಘಾತದಿಂದ ಎಡಕಾಲಿನ ಹೆಬ್ಬೆರಳಿಗೆ, ಎಡ ಮೊಣಕಾಲಿಗೆ ಹಾಗೂ ಸೊಂಟಕ್ಕೆ, ಹೊಟ್ಟೆಯ ಕೆಲಭಾಗಕ್ಕೆ ಪೆಟ್ಟಾಗಿದ್ದು, ಅವರು ಬರುತ್ತಿದ್ದ ದ್ವಿಚಕ್ರ ವಾಹನ ಸಂಖ್ಯೆ ಕೆಎ–18–ಇಎಂ–1590 ಹೋಂಡ ಶೈನ್ ಆಗಿತ್ತು ಎಂದರೆ ಸರಿಯಲ್ಲ. ಅಲ್ಲದೆ ಅಪಘಾತಪಡಿಸಿದ ಕಾರ್ ಸಂಖ್ಯೆ ಎಪಿ–09–ಬಿಟಿ–3271 ಮಾರುತಿ ಶಿಫ್ಟ್ ಕಾರ್ ಆಗಿತ್ತು ಎಂದರೆ ಸರಿಯಲ್ಲ. ನಂತರ ಗಾಯಾಳು ಮಂಜಪ್ಪನನ್ನು 108 ಆಂಬುಲೆನ್ಸ್ ಮೂಲಕ ಕಡೂರಿಗೆ ಕಳುಹಿಸಲಾಯಿತು ಎಂದರೆ ಸರಿಯಲ್ಲ. ಕಾರಿನ ಚಾಲಕನು ತನ್ನ ಕಾರನ್ನು ಅತೀ ವೇಗ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು, ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ ಬಗ್ಗೆ ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **180** ರಂತೆ ಪೊಲೀಸರ ಮುಂದೆ ನೀಡಿದ ಹೇಳಿಕೆಯ ಭಾಗವನ್ನು ಈ ಕೆಳಕಂಡಂತೆ ಓದಿ ಹೇಳಲಾಗಿ, ಸಾಕ್ಷಿಯು ಅದನ್ನು ನಿರಾಕರಿಸಿದರು. ಸದರಿ ಹೇಳಿಕೆಯ ಭಾಗವನ್ನು **ನಿಪಿ–10** ಎಂದು ಗುರುತಿಸಲಾಯಿತು.

ನಂತರ ದಿಃ 12.09.2024 ರಂದು ನನಗೆ ಮತ್ತು ಚಾಸಾ 2 ರವರಿಗೆ ಪಂಚನಾಮೆಗೆ ಸಹಕರಿಸಲು ಕೋರಿ ಪೋಲಿಸರು ನೋಟಿಸು ನೀಡಿದ್ದರು ಎಂದರೆ ಸರಿಯಲ್ಲ. ಅದೇ ದಿನ ಅಪಘಾತ ವಿಚಾರವಾಗಿ ಚಾಸಾ 4 ರವರು ಅಪಘಾತ ಸ್ಥಳವನ್ನು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ 2 ರವರ ಸಮಕ್ಷಮ ಮಧ್ಯಾಹ್ನ 3.30 ಗಂಟೆ 4.00 ಗಂಟೆ ಸಮಯದವರೆಗೆ ನಿಪಿ–3 ರಂತೆ ಪೋಲಿಸರು ಪಂಚನಾಮೆ ಜರುಗಿಸಿದ್ದು, ಸ್ಥಳದಲ್ಲಿ ನಿಪಿ–4 ಮತ್ತು 5 ರಂತೆ ಫೋಟೋ ತೆಗೆದರು ಎಂದರೆ ಸರಿಯಲ್ಲ. ಅದೇ ದಿನ ಯಗಟಿ ಪೋಲಿಸ್ ಠಾಣ ಆವರಣದಲ್ಲಿ ವಾಹನಗಳನ್ನು ಅಮಾನತುಪಡಿಸಿಕೊಳ್ಳಲು ನಿಪಿ–7 ರಂತೆ ಚಾಸಾ 2 ಮತ್ತು ನನಗೆ ಪೋಲಿಸರು ನೋಟಿಸು ನೀಡಿದ್ದರು ಎಂದರೆ ಸರಿಯಲ್ಲ. ಅದೇ ದಿನ ಅಪಘತಕ್ಕೀಡಾದ ಕಾರು ಮತ್ತು ದ್ವಿಚಕ್ರ ವಾಹನವನ್ನು ಸಂಜೆ 5.00 ರಿಂದ 6.00 ಗಂಟೆ ಸಮಯದವರೆಗೆ ಪಂಚನಾಮೆ ನಡೆಸಿ, ನಿಪಿ–8 ಮತ್ತು 9 ರಂತೆ ಫೋಟೊ ತೆಗೆದರು ಎಂದರೆ ಸರಿಯಲ್ಲ. ನಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಶ್ರೀ.ಆರ್.ಹೆಚ್.  ವಕೀಲರಿಂದ, ಆರೋಪಿತರ ಪರವಾಗಿ</u>**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆ : ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/–

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಕಡೂರು.